ಅ) ಈವರೆಗೆ ಎಷ್ಟು ಪ್ರಕರಣಗಳಲ್ಲಿ ಆರೋಪಿಗಳನ್ನು ಪತ್ತೆ ಹಚ್ಚಿ ನ್ಯಾಯಾಲಯದ ಮುಂದೆ ಹಾಜರಿಪಡಿಸಲಾಗಿದೆ. ಹಾಗೂ ಎಷ್ಟು ಪ್ರಕರಣಗಳಲ್ಲಿ ಆರೋಪಿಗಳ ಸುಳಿವು ಸಿಕ್ಕಿಲ್ಲ.

ಶ್ರೀ ಬಿ. ರಾಚಯ್ಯ (ಮಾನ್ಯ ಗೃಹ ಸಚಿವರು).—

ಅ) ಈ ಕೆಳಕಂಡಂತೆ ಪ್ರಕರಣಗಳು ದಾಖಲಾಗಿವೆ.

೧೯೮೪–೮೫—೨೧

೧೯೮೫——–೯

(ಜೂನ್‌ವರೆಗೆ)

ಅ) ಈ ಕೆಳಕಂಡಂತೆ ಪ್ರಕರಣಗಳಲ್ಲಿ ಆರೋಪಿಗಳನ್ನು ಪತ್ತೆ ಹಚ್ಚಿ ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿದೆ.	ಈ ಕೆಳಕಂಡಂತೆ ಪ್ರಕರಣಗಳಲ್ಲಿ ಆರೋಪಿಗಳ ಸುಳಿವು ಸಿಕ್ಕಿಲ್ಲ.
೧೯೮೪–೮೫—೩	೧೮
೧೯೮೫——–೫	೪
(ಜೂನ್‌ವರೆಗೆ)	

ರಾಜ್ಯ ಸರಕಾರದ ಚಲನಚಿತ್ರ ಸಬ್ಸಿಡಿ ಕೊಡುವ ನೀತಿ ಕುರಿತು

೧೪೮ (೮೨) ಶ್ರೀ ಜ್ಞಾನದೇವ ದೊಡ್ಡಮೇಟಿ (ರೋಣ).—ಮಾನ್ಯ ವಾರ್ತಾ ಯುವಜನ ಸೇವೆ, ಕ್ರೀಡೆ ಹಾಗೂ ಪ್ರವಾಸೋದ್ಯಮ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ ?

ಅ) ಕನ್ನಡ ಚಲನಚಿತ್ರಗಳಿಗೆ ಸಹಾಯಧನ ನೀಡುವಾಗ ಅನುಸರಿಸುತ್ತಿರುವ ನೀತಿ ಯಾವುದು?

ಆ) ಕರ್ನಾಟಕದಲ್ಲಿ ಪೂರ್ತಿಯಾಗಿ ಚಿತ್ರೀಕರಣಗೊಂಡ ಚಲನಚಿತ್ರಗಳಿಗೆ ಮಾತ್ರ ಸಹಾಯಧನ ನೀಡುವ ಯೋಜನೆ ಸರ್ಕಾರಕ್ಕೆ ಇದೆಯೇ ?

ಇ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರ ತೆಗೆದುಕೊಂಡಿರುವ ಕ್ರಮ ಹಾಗೂ ನಿರ್ಣಯಗಳೇನು ?

ಶ್ರೀ ಜೀವರಾಜ ಆಳ್ವ (ವಾರ್ತಾ, ಪ್ರವಾಸೋದ್ಯಮ ಮತ್ತು ಯುವಜನ ಇಲಾಖೆಯ ರಾಜ್ಯ ಸಚಿವರು).—

ಅ) ಪ್ರಸಕ್ತ ನಿಯಮಾವಳಿ ಪ್ರಕಾರ ಸಂಪೂರ್ಣವಾಗಿ ರಾಜ್ಯದಲ್ಲಿಯೇ ಚಿತ್ರೀಕರಣಗೊಂಡು, ತಯಾರಾದ ಕನ್ನಡ ಮತ್ತು ಇತರ ಪ್ರಾದೇಶಿಕ ಚಿತ್ರಗಳಿಗೆ ಸಹಾಯಧನ ನೀಡಲಾಗುತ್ತಿದೆ. ವರ್ಣ ಚಿತ್ರಗಳಿಗೆ ರೂ. ೧.೫೦ ಲಕ್ಷ ಹಾಗೂ ಕಪ್ಪು ಬಿಳುಪು ಚಿತ್ರಗಳಿಗೆ ರೂ. ೧.೦೦ ಲಕ್ಷ ಹಾಗೂ ರಾಜ್ಯದಲ್ಲಿಯೇ ತಯಾರಾಗಿ ಹೊರಗಡೆ ಸಂಸ್ಕರಣಗೊಂಡ ವರ್ಣ ಚಿತ್ರಗಳಿಗೆ ರೂ. ೭೫,೦೦೦–೦೦ ಸಹಾಯ ಧನವನ್ನು ನೀಡಲಾಗುತ್ತಿದೆ.

ಆ) ಹೌದು.

ಇ) ಅ ಮತ್ತು ಆ ಗಳಿಗೆ ನೀಡಿರುವ ಉತ್ತರದಿಂದ ಇದು ಉದ್ಭವಿಸುವುದಿಲ್ಲ.

ಹೋಮಿಯೋಪತಿ ಆಸ್ಪತ್ರೆ ಮಂಜೂರಾತಿ

೧೫೦ (೫೩) ಶ್ರೀಮತಿ ಸುಮಾ ವಸಂತ (ವೀರಾಜಪೇಟೆ).—ಮಾನ್ಯ ಆರೋಗ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ ?

ಅ) ವೀರಾಜಪೇಟೆ (ಪಾರಾಣೆ) ಗ್ರಾಮಕ್ಕೆ ಹೋಮಿಯೋಪತಿ ಆಸ್ಪತ್ರೆಯನ್ನು ಮಂಜೂರು ಮಾಡಲಾಗಿದೆಯೇ ? ಹಾಗಿದ್ದಲ್ಲಿ ಅದನ್ನು ಯಾವಾಗ ಮಾಡಲಾಯಿತು ?

ಆ) ಆಸ್ಪತ್ರೆಯನ್ನು ಇನ್ನೂ ಪ್ರಾರಂಭಿಸದೇ ಇರಲು ಕಾರಣವೇನು ?

ಇ) ಇದನ್ನು ಯಾವಾಗ ಪ್ರಾರಂಭಿಸಲಾಗುತ್ತದೆ ? ಹಾಗೂ ಇದಕ್ಕೆ ತಗಲುವ ವೆಚ್ಚವೆಷ್ಟು

ಡಾ।। ಹೆಚ್.ಎಲ್. ತಿಮ್ಮೇಗೌಡ (ಆರೋಗ್ಯ ಮಂತ್ರಿಗಳು).—

ಅ) ಹೌದು. ಜೂನ್ ೧೯೮೪ರಲ್ಲಿ ಮಂಜೂರು ಮಾಡಲಾಯಿತು.

ಆ) ವೈದ್ಯರ ನೇಮಕಾತಿಯಲ್ಲಿ ವಿಳಂಬವಾಗಿರುವುದರಿಂದ

ಇ) ಆದಷ್ಟು ಬೇಗ ಇದನ್ನು ಪ್ರಾರಂಭಿಸಲಾಗುವುದು, ಅದಕ್ಕೆ ತಗಲುವ ಅಂದಾಜು ವೆಚ್ಚ ೫೫,೨೮೬ ರೂಪಾಯಿಗಳು

ಅಲ್ಪಸಂಖ್ಯಾತ ವರ್ಗದವರಿಗೆ ರಾಜ್ಯೋತ್ಸವ ಪ್ರಶಸ್ತಿಗಳನ್ನು ಕೊಡುವುದನ್ನು ನಿರಾಕರಿಸಿರುವುದು

೧೫೧ (೩೧೬) ಶ್ರೀಮತಿ ಮುಕ್ತರುನ್ನೀಸಾ (ನರಸಿಂಹರಾಜ).—ಈ ಕೆಳಕಂಡ ಪ್ರಶ್ನೆಗೆ ಮಾನ್ಯ ವಾರ್ತಾ, ಪ್ರವಾಸೋದ್ಯಮ ಹಾಗೂ ಯುವಜನ ಸೇವಾ ರಾಜ್ಯ ಸಚಿವರು ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯೋತ್ಸವ ಮತ್ತು ರಾಜ್ಯ ಪ್ರಶಸ್ತಿ ನೀಡುವಲ್ಲಿ ಅಲ್ಪಸಂಖ್ಯಾತ ಕೋಮಿನವರನ್ನು ನಿರ್ಲಕ್ಷ್ಯ ಮಾಡಿರುವುದಕ್ಕೆ ಕಾರಣವೇನು ?

ಡಾ।। ಜೀವರಾಜ ಆಳ್ವ (ಮಾನ್ಯ ವಾರ್ತಾ, ಪ್ರವಾಸೋದ್ಯಮ ಹಾಗೂ ಯುವಜನ ಸೇವಾ ಖಾತೆಯ ರಾಜ್ಯ ಸಚಿವರು).—

ಅ) ರಾಜ್ಯೋತ್ಸವದ ರಾಜ್ಯ ಪ್ರಶಸ್ತಿ ನೀಡುವಲ್ಲಿ ಅಲ್ಪಸಂಖ್ಯಾತ ಕೋಮಿನವರನ್ನು ನಿರ್ಲಕ್ಷ್ಯ ಮಾಡಲಾಗಿಲ್ಲ.

ಆರಕ್ಷಕ ಇಲಾಖೆಯಲ್ಲಿ ಖಾಲಿ ಇರುವ ಹುದ್ದೆಗಳು

೧೫೨ (೬೮೫) ಶ್ರೀ ರಮೇಶ್ ಕುಮಾರ್ (ಶ್ರೀನಿವಾಸಪುರ).—ಮಾನ್ಯ ಗೃಹ ಮಂತ್ರಿಗಳು ಈ ಕೆಳಕಂಡ ವಿಷಯಗಳನ್ನು ದಯವಿಟ್ಟು ತಿಳಿಸುವರೆ ?

ಅ) ರಾಜ್ಯದಲ್ಲಿರುವ ಆರಕ್ಷಕ ಮಹಾ ನಿರ್ದೇಶಕರು, ವಿಶೇಷ ಆರಕ್ಷಕ ಮಹಾ ನಿರೀಕ್ಷಕರು, ಆರಕ್ಷಕ ಉಪ ಮಹಾನಿರೀಕ್ಷಕರು, ಆರಕ್ಷಕ ಅಧೀಕ್ಷಕರು ಮತ್ತು ಆರಕ್ಷಕ ಉಪ ಅಧೀಕ್ಷಕರು ಹಾಗೂ ಪೋಲೀಸ್ ದಳದ ಬಲ ಮತ್ತು ಆರಕ್ಷಕ ಉಪ ನಿರೀಕ್ಷಕರ ಒಟ್ಟು ಸಂಖ್ಯೆ (ಈ ತಹಲ್‌ವರೆಗಿನ ಅಂಕಿ ಗಳನ್ನು ಒದಗಿಸುವುದು)

ಆ) ಯಾವ ಆಧಾರದ ಮೇಲೆ ಮೇಲ್ಕಂಡ ಹುದ್ದೆಗಳನ್ನು ನಿಗದಿಪಡಿಸಲಾಗಿದೆ.

ಶ್ರೀ ಬಿ. ರಾಚಯ್ಯ (ಗೃಹ ಮಂತ್ರಿಗಳು).—

ಈ ಕೆಳಕಂಡಂತಿವೆ :

೧ ಆರಕ್ಷಕ ಮಹಾನಿರ್ದೇಶಕರು	೩
೨ ವಿಶೇಷ ಆರಕ್ಷಕ ಮಹಾನಿರೀಕ್ಷಕರು	೭
೩ ಆರಕ್ಷಕ ಉಪ ಮಹಾನಿರೀಕ್ಷಕರು (ವ್ಯಾಸಂಗದ ರಜೆಯ ಮೇಲೆ ಇರುವ ಒಬ್ಬರೂ ಸೇರಿ)	೨೭
೪ ಆರಕ್ಷಕ ಅಧೀಕ್ಷಕರು (ಐ.ಪಿ.ಎಸ್) (ವ್ಯಾಸಂಗದ ರಜೆಯ ಮೇಲೆ ಇರುವ ಇಬ್ಬರೂ ಸೇರಿ)	೪೮